**ಅರ್ಚಿತ್:** ಯಾಕೋ ಗುಂಡ ನಿನ್ನೆ ರಜೆ ಹಾಕಿದ್ದಿಯಲ್ಲ?
**ಗುಂಡ:** ಹೋಮ್ ಮಿನಿಸ್ಟರ್ ಆರ್ಡರ್ ಸರ್!
**ಅರ್ಚಿತ್:** ಹೌದಾ. ನಂಗೊತ್ತೆ ಇಲ್ವಲ್ಲೊ. ಹೋಮ್ ಮಿನಿಸ್ಟರ್ ಏನಂತ ಆರ್ಡರ್ ಮಾಡಿದ್ರೊ?
**ಗುಂಡ:** ಸರ್ ಹೋಮ್ ಮಿನಿಸಸ್ಟರ್ ಅಂದ್ರೆ ನನ್ನ ಹೆಂಡತಿ. ಸರ್ಕಾರದ ಹೋಮ್ ಮಿನಿಸ್ಟರ್ ಅಲ್ಲ.

***

**ಅರ್ಚಿತ್:** ನಮ್ಮ ಮನೆಯಲ್ಲಿ ಅಪ್ಪ ಅಮ್ಮನಿಗಿಂತ ಹೆಚ್ಚಾಗಿ ನನ್ನ ಮಾತು ಕೇಳುತ್ತಾರೆ ಕಣೋ!
**ಗಂಡ:** ನಿಮ್ಮ ಮನೆಯಲ್ಲಿ ಪರವಾಗಿಲ್ಲ ಕಣೋ. ನಮ್ಮ ಮನೆಯಲ್ಲಿ ಗೂಗಲ್‌ನಲ್ಲಿ ನೋಡಿದ್ರೂ ನಂಬಲ್ಲ! ಅಮ್ಮ ಒಕೆ ಅಂದ್ರೆ ಮಾತ್ರ ನಂಬೋದು!

***

**ಅರ್ಚಿತ್:** ಕೊರೊನಾದಿಂದಾಗಿ ಉದ್ಯೋಗ ಕಳೆದುಕೊಂಡರೂ ಯಾಕೆ ಮದುವೆಗೆ ಆತುರ ಪಡ್ತಿದ್ದಿಯಾ?
**ಗುಂಡ:** ಎಲ್ಲರ ಯಶಸ್ಸಿನ ಹಿಂದೆ ಒಬ್ಬಳು ಮಹಿಳೆ ಇರ್ತಾಳೆ ಅಂತಾರಲ್ಲ. ಇನ್ನೇಲಾದ್ರು ಒಳ್ಳೆಯದಾಗಬಹುದು ಅಂತ!

***

**ಅರ್ಚಿತ್:** ಯಾಕೊ ಗುಂಡ ಕೊರೊನಾ ಇರುವವರೆಗೂ ಹೋಮ್ ವರ್ಕ್ ಮಾಡಲ್ಲ ಅಂತೀಯ?
**ಗುಂಡ:** ಶಾಲೆಯಲ್ಲಿ ಶಿಕ್ಷಕರು ನಮ್ಮಿಂದ ಸಾಮಾಜಿಕ ಅಂತರ ಕಾಯ್ದುಕೊಳ್ಳಬಹುದು ಅಂತ ಕಣೊ.

***

**ಅರ್ಚಿತ್:** ಯಾಕೊ ಗುಂಡ. ಬೇಜಾರಲ್ಲಿ ಇದ್ದಿಯಾ. ಪುಸ್ತಕ ಪೆನ್ನು ಕಳುವಾಯ್ತಾ.
**ಗುಂಡ:** ಅದಕ್ಕಿಂತ ಹೆಚ್ಚಾಗಿ. ನಮ್ಮ ಅಂಕಲ್ ವಿದೇಶದಿಂದ ಕಳುಹಿಸಿದ್ದ ಮಾಸ್ಕನ್ನೇ ಯಾರೊ ಕದ್ದು ಬಿಟ್ಟಿದ್ದಾರೆ ಕಣೊ.


***

**ಹೆಂಡತಿ:** ತರಕಾರಿ ಬೆಲೆ ತುಂಬಾ ಹೆಚ್ಚಾಗಿದೆ ಕಣ್ರಿ.
**ಗಂಡ:** ಹು ಕಣೆ. ನಂಗೂ ಅದೇ ಚಿಂತೆ. ಡಾಕ್ಟರ್ ಬೇರೆ ಬರೀ ತರಕಾರಿನೇ ಹೆಚ್ಚಾಗಿ ತಿನ್ನಿ ಅಂತ ಹೇಳವ್ರೆ. ಜೇಬಲ್ಲಿ ನೋಡಿದ್ರೆ ಕಾಸಿಲ್ಲ. ಅದೇ ಆಲೋಚನೆ ಆಗಿದೆ!

***

**ಮಾವ:** ಏನು ಅಳಿಯಂದ್ರೆ ಸಾವಿರಕ್ಕೂ ಹೆಚ್ಚು ಫ್ರೆಂಡ್ಸ್ ಇದ್ದಾರೆ ಎನ್ನುತ್ತಿದ್ದಿರಿ. ಮದುವೆಗೆ ಯಾರು ಬರಲೇ ಇಲ್ಲ.
**ಅಳಿಯ:** ಅವರೆಲ್ಲ ಫೇಸ್‌ಬುಕ್ ಫ್ರೆಂಡ್ಸ್ ಮಾವಯ್ಯ.

ಸಂಗ್ರಹ: ರಾಜೇಶ ನಾಯ್ಕ, ಅಂಕೋಲ




**ಇಷ್ಟೂ ಹಣವನ್ನು ಕುಡಿಯುವ ನೀರಿನ ಯೋಜನೆಗೆ ಅನುದಾನವಾಗಿ ಬಳಸ್ತಿರೊ ಅಥವಾ ನಿಮ್ಮ ಸ್ವಂತ ಬಳಕೆಗೆ ಉಪಯೋಗಿಸ್ತಿರೊ ಸ್ವಾಮಿ?**

**ಅಪ್ಪ:** ಮಗಳೇ ನಿನಗೆ ಯಾವ ತರಹದ ಗಂಡು ಬೇಕು?
**ಮಗಳು:** ತುಂಬ ತಾಳ್ಮೆ ಇರವಂತಹ ಗಂಡು ಸಿಕ್ರೆ ಓಕೆ ಅಪ್ಪ.
**ಅಪ್ಪ:** ಓಹ್, ಹಾಗಾದರೆ ಆರ್‌ಸಿಬಿ ಫ್ಯಾನ್ ಆದ್ರೆ ಓಕೆ ಅಲ್ವಾ!

***

**ತಿಮ್ಮಾ:** ಲವ್ ಮ್ಯಾರೇಜ್ ಒಳ್ಳೆಯದೋ? ಅರೇಂಜ್ ಮ್ಯಾರೇಜ್ ಒಳ್ಳೆಯದೋ?
**ಗುಂಡ:** ಅದ್ ಇರ್ಲಿ. ಮೊದಲು, ಮದುವೆಯಾಗುವುದು ಒಳ್ಳೆಯದು ಅಂತ ಯಾರು ಹೇಳಿದ್ದು ನಿಮಗೆ?

***

**ಬಬ್ಲಿ:** ಬಂಟಿ ನಿನ್ನ ಸಾಬೂನು ಸ್ಲೋನಾ?
**ಬಂಟಿ:** ಇಲ್ಲಪ್ಪ ನನ್ನ ಸಾಬೂನು ರೆಕ್ಸೋನಾ.

***

**ಹೆಂಡತಿ:** ಮಗಳು ದೊಡ್ಡವಳಾದ ಮೇಲೆ ಗಂಡು ಹುಡುಗರು ಫಾಲೊ ಮಾಡಿದ್ರೆ ಏನ್ ಮಾಡೋದು?
**ತಿಮ್ಮ:** ಯೋಚನೆ ಮಾಡ್ಬೇಡ. ಅವಳಿಗೆ 'ಅಕ್ಕ' ಅಂತ ಹೆಸರು ಇಟ್ಬಿಡೋಣ.

***

**ಗುಂಡ:** ಸರ್, ನಿಮ್ಮ ನಾಯಿ ಕಚ್ಚಲ್ವಾ?
**ಅಂಗಡಿಯವ:** ಇಲ್ಲ, ನಮ್ಮ ನಾಯಿ ಕಚ್ಚಲ್ಲ. ಬಹಳ ಒಳ್ಳೆಯದು.
**ಗುಂಡ:** (ಒಂದೆಜ್ಜೆ ಇಟ್ಟ ಕೂಡಲೇ ನಾಯಿ ಕಚ್ಚಿತು) ಏನ್ ಸಾರ್ ಕಚ್ಚಲ್ಲ ಅಂದ್ರಿ. ಅದ್ ನೋಡಿದ್ರೆ ಕಚ್ಚೇ ಬಿಡ್ತು.
**ಅಂಗಡಿಯವ:** ಲೋ ಗುಂಡ, ಅದು ಬೀದಿ ನಾಯಿ. ನಮ್ಮ ನಾಯಿ ಮನೆಯೊಳಗೆ ಇದೆ!

***

**ಹೆಂಡತಿ:** ರೀ... ಈ ಕಂಪ್ಯೂಟರ್ ನಾನು ಹೇಳಿದ ಹಾಗೆ ಕೆಲಸ ಮಾಡ್ತಿಲ್ಲ.
**ಗಂಡ:** ಅದು ಕಂಪ್ಯೂಟರ್ ಕಣೇ! ನಿನ್ನ ಗಂಡ ಅಲ್ಲ.

***

**ಡಾಕ್ಟರ್:** ಈ ಟಾನಿಕ್ ಅನ್ನು ದಿನಕ್ಕೆ ನಾಲ್ಕು ಸ್ಪೂನ್ ತಗೊಳ್ಳಿ ಸರಿನಾ?
**ಕಲ್ಲೇಶಿ:** ಆದರೆ ನಮ್ಮ ಮನೆಯಲ್ಲಿ ಒಂದೇ ಸ್ಪೂನ್ ಇರೋದು ಡಾಕ್ಟ್ರೇ ಏನ್ ಮಾಡ್ಲಿ.

–ಶರದ ಕುಲಕರ್ಣಿ, ಬೀದರ್